# ‘ಉಮಂಗ್’ ಸಾಂಸ್ಕೃತಿಕ ಉತ್ಸವ

**ಹಳಿಯಾಳ:** ಕೆಎಲ್‌ಎಸ್ ವಿಡಿಐಟಿ ಹಳಿಯಾಳದಲ್ಲಿ ಸಾಂಸ್ಕೃತಿಕ ಉತ್ಸವ ''ಉಮಂಗ್'' ಜರುಗಿತು.

ಯುವ ಹಿನ್ನೆಲೆ ಗಾಯಕರುಗಳಾದ ಆಶಾ ಭಟ್, ಪೂಜಾ ವಿಭೂತಿ ಮಠ, ಹರ್ಷ ಉಪ್ಪಾರ್ ಮತ್ತು ಪಂಚಂ ಜೀವ ತಮ್ಮ ಸಂಗೀತ ಸುಧೆಯಿಂದ ಮನರಂಜಿಸಿದರು.

ಆಲ್ ಓಕೆ ಸಂಗೀತ ತಂಡದವರು ಸಂಗೀತ ಕಾರ್ಯಕ್ರಮವನ್ನು ನೆರವೇರಿಸಿ ಕೊಟ್ಟರು. ಆಲ್ ಓಕೆ ತಂಡದ ಖ್ಯಾತ ಹಿನ್ನೆಲೆ ಗೌಯಕ ಅಲೋಕ್ ಬಾಬು, ದಿವ್ಯಾ ರಾಮಚಂದ್ರ, ಖ್ಯಾತ ಆರ್. ಜೆ. ರಶೀದ್ ಸಂಗೀತ ಲಹರಿಯಿಂದ ನೆರೆದವರ ಮನರಂಜಿಸಿದರು.

ಮಹಾವಿದ್ಯಾಲಯದ ವಿದ್ಯಾರ್ಥಿಗಳು ಭಾರತೀಯ, ಪಾಶ್ಚಿಮಾತ್ಯ ಸೇರಿದಂತೆ ಅನೇಕ ಪ್ರಕಾರಗಳ ಸಾಂಸ್ಕೃತಿಕ ಕಲಾಪ್ರದರ್ಶವನ್ನು ಇದೇ ಸಂದರ್ಭದಲ್ಲಿ ಸಾದರ ಪಡಿಸಿದರು.

ಒಂದು ವಾರದಿಂದ ವಿದ್ಯಾರ್ಥಿಗಳು ಕಪ್ಪು ಬಿಳುಪು ದಿನ, ಸಂಪ್ರದಾಯ ದಿನ ಸೇರಿದಂತೆ ವಿವಿಧ ದಿನಗಳನ್ನು ಆಚರಿಸಿ ಸಂಭ್ರಮಿಸಿದರು.

ಶೈಕ್ಷಣಿಕ ಪ್ರಗತಿಯ ಜೊತೆಗೆ ಸಾಂಸ್ಕೃತಿಕ ಬೆಳವಣಿಗೆಯು ಮುಖ್ಯವಾಗಿರುವುದರಿಂದ, ವಿದ್ಯಾರ್ಥಿಗಳ ಸಾಂಸ್ಕೃತಿಕ ಕಲಾ ಪ್ರದರ್ಶನಕ್ಕೆ ಉಮಂಗ್ ಒಂದು ಉತ್ತಮ ವೇದಿಕೆಯಾಗಿದೆ ಎಂದು ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಹೇಳಿದರು.

ಸಂಗೀತ ಸಂಜೆಯಲ್ಲಿ ಮನರಂಜಿಸಿದ ಹಿನ್ನೆಲೆ ಗಾಯಕರುಗಳಿಗೆ ಪ್ರಾಚಾರ್ಯರು ಪುರಸ್ಕರಿಸಿದರು. ಹಳಿಯಾಳ ಪಟ್ಟಣದ ಅಪರಾಧ ವಿಭಾಗದ ಪಿಎಸ್‌ಐ ಅಮ್ಮಿನ್ ಅತ್ತಾರ್ ಉಪಸ್ಥಿತರಿದ್ದರು. ಡಾ. ಮುರುಗಯ್ಯ, ಪ್ರೊ. ಅಲ್ಲಮಪ್ರಭು ಕೊಳಕಿ ಮತ್ತು ಡಾ. ಮಹೇಂದ್ರ ದೀಕ್ಷಿತ್ ಕಾರ್ಯಕ್ರಮ ಸಂಯೋಜಿಸಿದ್ದರು . ಉಮಂಗ್ ಸಾಂಸ್ಕೃತಿಕ ಉತ್ಸವದಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು , ಪಾಲಕರು, ಸಿಬ್ಬಂದಿ ಕುಟುಂಬ, ಹಳೆಯ ವಿದ್ಯಾರ್ಥಿಗಳು ಸೇರಿದಂತೆ 1500ಕ್ಕೂ ಅಧಿಕ ಜನ ಪಾಲ್ಗೊಂಡಿದ್ದರು.



# ಉಮಂಗ್ ಸಾಂಸ್ಕೃತಿ ಉತ್ಸವ ಸಂಪನ್ನ

**ನುಡಿಜೇನು ವರದಿ**

**ಹಳಿಯಾಳ:** ಕೆಎಲ್‌ಎಸ್ ವಿಡಿಐಟಿಯಲ್ಲಿ ಸಾಂಸ್ಕೃತಿಕ ಉತ್ಸವ 'ಉಮಂಗ್' ಎರಡು ದಿನಗಳ ಕಾಲ ಅದ್ಧೂರಿಯಾಗಿ ಜರುಗಿತು.

ಯುವ ಹಿನ್ನೆಲೆ ಗಾಯಕರುಗಳಾದ ಆಶಾ ಭಟ್, ಪೂಜಾ ವಿಭೂತಿಮಠ, ಹರ್ಷ ಉಪ್ಪಾರ್ ಮತ್ತು ಪಂಚಂ ಜೀವ ತಮ್ಮ ಸಂಗೀತ ಸುಧೆಯಿಂದ ಮನರಂಜಿಸಿದರು. ಆಲ್‌ಓಕೆ ಸಂಗೀತ ತಂಡದವರು ಸಂಗೀತ ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು. ಆಲ್‌ಓಕೆ ತಂಡದ ಖ್ಯಾತ ಹಿನ್ನೆಲೆ ಗಾಯಕ ಅಲೋಕ್ ಬಾಬು, ದಿವ್ಯಾ ರಾಮಚಂದ್ರ, ಖ್ಯಾತ ಆರ್‌ಜೆ ರಶೀದ್ ಸಂಗೀತ ಲಹರಿಯಿಂದ ನೆರೆದವರ ಮನರಂಜಿಸಿದರು.

ಮಹಾವಿದ್ಯಾಲಯದ ವಿದ್ಯಾರ್ಥಿಗಳು ಭಾರತೀಯ, ಪಾಶ್ಚಿಮಾತ್ಯ ಸೇರಿದಂತೆ ಅನೇಕ ಪ್ರಕಾರಗಳ ಸಾಂಸ್ಕೃತಿಕ ಕಲಾಪ್ರದರ್ಶನವನ್ನು ಇದೇ ಸಂದರ್ಭದಲ್ಲಿ ಸಾಗರಪಡಿಸಿದರು. ಒಂದು ವಾರದಿಂದ ವಿದ್ಯಾರ್ಥಿಗಳು ಕಪ್ಪು ಬಿಳುಪು ದಿನ, ಸಂಪ್ರದಾಯ ದಿನ ಸೇರಿದಂತೆ ವಿವಿಧ ದಿನಗಳನ್ನು ಆಚರಿಸಿ ಸಂಭ್ರಮಿಸಿದರು.

ಶೈಕ್ಷಣಿಕ ಪ್ರಗತಿಯ ಜೊತೆಗೆ ಸಾಂಸ್ಕೃತಿಕ ಬೆಳವಣಿಗೆಯು ಮುಖ್ಯವಾಗಿರುವುದರಿಂದ ವಿದ್ಯಾರ್ಥಿಗಳ ಸಾಂಸ್ಕೃತಿಕ ಕಲಾ ಪ್ರದರ್ಶನಕ್ಕೆ ಉಮಂಗ್ ಒಂದು ಉತ್ತಮ ವೇದಿಕೆಯಾಗಿದೆ ಎಂದು ಪ್ರಾಚಾರ್ಯ ಡಾ.ವಿ.ಎ.ಕುಲಕರ್ಣಿ ಹೇಳಿದರು. ಸಂಗೀತ ಸಂಜೆಯಲ್ಲಿ ಮನರಂಜಿಸಿದ ಹಿನ್ನೆಲೆ ಗಾಯಕರುಗಳಿಗೆ ಪ್ರಾಚಾರ್ಯ ಪುರಸ್ಕರಿಸಿದರು. ಪಟ್ಟಣದ ಅಪರಾಧ ವಿಭಾಗದ ಪಿಎಸ್‌ಐ ಅಮ್ಮಿನ್ ಅತ್ತಾರ್ ಇದೇ ಸಂದರ್ಭದಲ್ಲಿ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಡಾ.ಮುರುಗಯ್ಯ, ಪ್ರೊ.



ಅಲ್ಲಮಪ್ರಭು ಕೊಳಕಿ ಮತ್ತು ಡಾ.ಮಹೇಂದ್ರ ದೀಕ್ಷಿತ್ ಕಾರ್ಯಕ್ರಮ ಸಂಯೋಜಿಸಿದ್ದರು. ಉಮಂಗ್ ಸಾಂಸ್ಕೃತಿಕ ಉತ್ಸವದಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು, ಪಾಲಕರು, ಸಿಬ್ಬಂದಿಗಳ ಕುಟುಂಬ, ಮಾಜಿ ವಿದ್ಯಾರ್ಥಿಗಳು ಸೇರಿದಂತೆ 1500ಕ್ಕೂ ಅಧಿಕ ಜನ ಪಾಲ್ಗೊಂಡಿದ್ದರು.

# ವಿಜೃಂಭಣೆಯಿಂದ ಜರುಗಿದ ಸಾಂಸ್ಕೃತಿಕ ಉತ್ಸವ "ಉಮಂಗ್"



**ಕೊಂಕಣವಾಹಿನಿ ನ್ಯೂಸ್,**

**ಹಳಿಯಾಳ:** ಕೆಎಲ್ಎಸ್ ವಿಡಿಐಟಿ ಹಳಿಯಾಳದಲ್ಲಿ ಸಾಂಸ್ಕೃತಿಕ ಉತ್ಸವ "ಉಮಂಗ್" ಡಿಸೆಂಬರ್ 16 ಮತ್ತು 17ರಂದು ಜರುಗಿತು.

ಡಿಸೆಂಬರ್ 16ರಂದು ಉದ್ಘಾಟನೆಗೊಂಡ ಈ ಸಾಂಸ್ಕೃತಿಕ ಉತ್ಸವವು ಎರಡು ದಿನ ವಿಜೃಂಭಣೆಯಿಂದ ಜರುಗಿತು. ಡಿಸೆಂಬರ್ 16 ರ ಸಂಜೆ ಯುವ ಹಿನ್ನೆಲೆ ಗಾಯಕರಾದ ಆಶಾ ಭಟ್, ಪೂಜಾ ವಿಭೂತಿ ಮಠ, ಹರ್ಷ ಉಪ್ಪಾರ್ ಮತ್ತು ಪಂಚಂ ಜೀವ ತಮ್ಮ ಸಂಗೀತ ಸುಧೆಯಿಂದ ಮನರಂಜಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ಗಾಯಕ ಪಂಚಂ ಜೀವ ಅವರು ಶ್ವಾನಗಳ ಪ್ರೀತಿಯ ಬಗ್ಗೆ ಮನಮುಟ್ಟುವ ಸಂದೇಶ ಸಾರಿದರು. ಡಿಸೆಂಬರ್ 17ರ ಸಂಜೆ ಆಲ್ ಓಕೆ ಸಂಗೀತ ತಂಡದವರು ಸಂಗೀತ ಕಾರ್ಯಕ್ರಮವನ್ನು ನೆರವೇರಿಸಿ ಕೊಟ್ಟರು. ಆಲ್ ಓಕೆ ತಂಡದ ಖ್ಯಾತ ಹಿನ್ನೆಲೆ ಗಾಯಕ ಅಲೋಕ್ ಬಾಬು, ದಿವ್ಯಾ ರಾಮಚಂದ್ರ, ಖ್ಯಾತ ಆರ್. ಜೆ. ರಶೀದ್ ಸಂಗೀತ ಲಹರಿಯಿಂದ ನೆರೆದವರ ಮನರಂಜಿಸಿದರು.

ಮಹಾವಿದ್ಯಾಲಯದ ವಿದ್ಯಾರ್ಥಿಗಳು ಭಾರತೀಯ, ಪಾಶ್ಚಿಮಾತ್ಯ ಸೇರಿದಂತೆ ಅನೇಕ ಪ್ರಕಾರಗಳ ಸಾಂಸ್ಕೃತಿಕ ಕಲಾಪ್ರದರ್ಶವನ್ನು ಇದೇ ಸಂದರ್ಭದಲ್ಲಿ ಸಾದರ ಪಡಿಸಿದರು.

ಒಂದು ವಾರದಿಂದ ವಿದ್ಯಾರ್ಥಿಗಳು ಕಪ್ಪು ಬಿಳುಪು ದಿನ, ಸಂಪ್ರದಾಯ ದಿನ ಸೇರಿದಂತೆ ವಿವಿಧ ದಿನಗಳನ್ನು ಆಚರಿಸಿ ಸಂಭ್ರಮಿಸಿದರು. ಶೈಕ್ಷಣಿಕ ಪ್ರಗತಿಯ ಜೊತೆಗೆ ಸಾಂಸ್ಕೃತಿಕ ಬೆಳವಣಿಗೆಯು ಮುಖ್ಯವಾಗಿರುವುದರಿಂದ, ವಿದ್ಯಾರ್ಥಿಗಳ ಸಾಂಸ್ಕೃತಿಕ ಕಲಾ ಪ್ರದರ್ಶನಕ್ಕೆ ಉಮಂಗ್ ಒಂದು ಉತ್ತಮ ವೇದಿಕೆಯಾಗಿದೆ ಪ್ರಾಚಾರ್ಯ ಡಾ. ವಿ. ಎ. ಕುಲಕರ್ಣಿ ಹೇಳಿದರು. ಸಂಗೀತ ಸಂಜೆಯಲ್ಲಿ ಮನರಂಜಿಸಿದ ಹಿನ್ನೆಲೆ ಗಾಯಕರುಗಳಿಗೆ ಪ್ರಾಚಾರ್ಯರು ಪುರಸ್ಕರಿಸಿದರು. ಹಳಿಯಾಳ ಪಟ್ಟಣದ ಅಪರಾಧ ವಿಭಾಗದ ಪಿಎಸ್ಐ ಅಮ್ಮಿನ್ ಅತ್ತಾರ್ ಇದೇ ಸಂದರ್ಭದಲ್ಲಿ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಡಾ. ಮುರುಗಯ್ಯ, ಪ್ರೊ. ಅಲ್ಲಮಪ್ರಭು ಕೊಳಕಿ ಮತ್ತು ಡಾ. ಮಹೇಂದ್ರ ದೀಕ್ಷಿತ್ ಕಾರ್ಯಕ್ರಮ ಸಂಯೋಜಿಸಿದ್ದರು. ಉಮಂಗ್ ಸಾಂಸ್ಕೃತಿಕ ಉತ್ಸವದಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು , ಪಾಲಕರು, ಸಿಬ್ಬಂಧಿಗಳ ಕುಟುಂಬ, ಮಾಜಿ ವಿದ್ಯಾರ್ಥಿಗಳು ಸೇರಿದಂತೆ 1500ಕ್ಕೂ ಅಧಿಕ ಜನ ಪಾಲ್ಗೊಂಡಿದ್ದರು.